**ದಿನಾಂಕಃ 25.07.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಟಿ.ಎಸ್. ವಕೀಲರಿಂದಃ–**

1. ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಗಳು ನನಗೆ ಸಂಬಂಧಿಕರಲ್ಲ. ನಿಡಿ–3 ಸರ್ವೆ ನಂಬರ್ಃ53/1 ಬಿ ಸ್ವತ್ತನ್ನು ಬುರುಜನಮಲ್ಲಪ್ಪನ ಮಕ್ಕಳಾದ ಕೆಂಚಪ್ಪ, ಸಂಜೀವಪ್ಪ ಮತ್ತು ಓಬಣ್ಣನವರು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ. ಸದರಿ ಓಬಣ್ಣ ವಾದಿ ರಾಮಚಂದ್ರಪ್ಪನವರ ತಂದೆ ಎಂದರೆ ಸರಿ. ಸರ್ವೆ ನಂಬರ್ಃ368 ರಲ್ಲಿ 5 ಎಕರೆ 8 ಗುಂಟೆ ವಿಸ್ತೀರ್ಣ ಸ್ವತ್ತು ಎ.ಕೆ. ಹನುಮಂತಪ್ಪ ತಂದೆ ಸಂಜೀವಪ್ಪನವರಿಗೆ ದರಕಾಸ್ತ್ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ಃ368 ರ ಸ್ವತ್ತು ವಾದಿಯರ ಒಟ್ಟು ಕುಟುಂಬಕ್ಕೆ ನೀಡಿದ ಸ್ವತ್ತು ಎಂದರೆ ಸಾಕ್ಷಿಯು ಅದನ್ನು ಕ್ರಯಕ್ಕೆ ಪಡೆದಿದ್ದಾರೆ ಎಂದು ನುಡಿಯುತ್ತಾರೆ.

2. ಬುರುಜನಮಲ್ಲಪ್ಪನವರಿಗೆ ಇಬ್ಬರು ಪತ್ನಿಯರು ಇದ್ದು ಮೊದಲನೆಯವರು ಕೆಂಚಮ್ಮ ಆಗಿರುತ್ತಾರೆ. ಕೆಂಚಮ್ಮನವರಿಗೆ ಮೂರು ಜನ ಮಕ್ಕಳು. 2 ನೆಯವರು ತೋಪಮ್ಮ. ಅವರಿಗೆ ಮೂರು ಜನ ಮಕ್ಕಳು. ವಾದಿ ತೋಪಮ್ಮನ ಮಗನಾದ ಓಬಣ್ಣನ ಮಗ ಎಂದರೆ ಸರಿ. ಬುರುಜನಮಲ್ಲಪ್ಪನ ಇಬ್ಬರು ಪತ್ನಿಯರು ದಾವಾ ಸ್ವತ್ತನ್ನು ಒಳಗೊಂಡಂತೆ ಅವರ ಕುಟುಂಬದ ಸ್ವತ್ತನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಬುರುಜನಮಲ್ಲಪ್ಪನ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಇದ್ದಾರೆ ಎಂದರೆ ಸಾಕ್ಷಿಯು ಸಿದ್ದಪ್ಪ, ಹನುಮಂತಪ್ಪ ಮತ್ತು ರಂಗಸ್ವಾಮಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ.

3. ದಾವಾ ಸ್ವತ್ತುಗಳನ್ನು ಸಿದ್ದಣ್ಣನಿಂದ ದಿನಾಂಕಃ27.12.1988 ರಲ್ಲಿ ವಾಪಾಸ್ ಪಡೆದ ಬಗ್ಗೆ ಕರಾರು ಪತ್ರ ಮಾಡಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿರುತ್ತೇನೆ. ಸದರಿ ಕರಾರು ಆಗುವ ದಿನ ನಾನು ಹಾಜರು ಇರಲಿಲ್ಲ. ಸದರಿ ಕರಾರು ಪತ್ರವನ್ನು ನಾನು ಓದಿದ್ದೇನೆ. ಅದರಲ್ಲಿರುವ ವಿಚಾರಗಳು ನನಗೆ ಗೊತ್ತಿರುತ್ತವೆ.

**ಮುಂದುವರಿದ ಪಾಟೀ–ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.